
ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-2, September-October 2025, Pp. 30-32
©*IIMRD*, Mysuru

IIMRD JOURNALS
www.iimrd.com

# ಪುನರ್–ಅವಲೋಕಿಸುವಂತೆ ಮಾಡುವ ‘ಪುನರವಲೋಕನ’

**ಡಾ. ಕವಿತಾ ಪಿ. ಎನ್**
ರೀಸರ್ಚ್ ಅಸೋಸಿಯೆಟ್, ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ (ಸಿಇಎಸ್ಎಸ್), ಬೆಂಗಳೂರು




ಆಧುನಿಕ ರಾಜಕೀಯ ಚಿಂತನೆಗಳು ಭಾರತದ ಸಾಮಾಜಿಕ, ಧಾರ್ಮಿಕ, ರಾಜಕೀಯದ ಮೇಲೆ ಬೀರಿರುವ ಪರಿಣಾಮ ಮತ್ತು ಅದರಿಂದ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ಉದಾಹರಿಸುವ ಮೂಲಕ ಆ ಸಮಸ್ಯೆಗಳ ಬುನಾದಿಯನ್ನು ಹುಡುಕುವ ಒಂದು ಗಂಭೀರ ಪ್ರಯತ್ನವನ್ನು ಕುವೆಂಪು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎ. ಷಣ್ಮುಖ ಅವರು ಬರೆದಿರುವ **ಪುನರವಲೋಕನ** ಪುಸ್ತಕವು ಸಮರ್ಪಕವಾಗಿ ನಿರ್ವಹಿಸಿದೆ. ಪುರವಲೋಕನ ಪುಸ್ತಕವನ್ನು ಓದಿದ ನಂತರ ಓದುಗ ಒಮ್ಮೆಯಾದರೂ ಪುನರ್–ಅವಲೋಕಿಸುವಂತೆ ಮಾಡುತ್ತದೆ.

ಶ್ರೀ ಸಾಮಾನ್ಯನಿಂದ ಮೊದಲುಗೊಂಡು ಬುದ್ಧಿಜೀವಿಗಳು, ಭಾರತದ ಕುರಿತು ಮಾತನಾಡುವ ಸಂದರ್ಭದಲ್ಲೆಲ್ಲಾ, ಭಾರತೀಯ ಸಮಾಜವು ಜಾತಿವ್ಯವಸ್ಥೆ ಆಧಾರಿತವಾಗಿದೆ, ಬಡತನ–ಅನಕ್ಷರತೆಯಿಂದಾಗಿ ಸಮಾಜವು ಹಿಂದುಳಿದಿದೆ, ಮೂಢನಂಬಿಕೆಯನ್ನು ಅಪ್ಪಿಕೊಂಡಿದೆ, ರಾಜಕೀಯ ಪರಿಸ್ಥಿತಿ ಮತ್ತು ಅದರ ಭಾಗವಾದ ಭ್ರಷ್ಟಾಚಾರವಂತು ಹೇಳತೀರದು ಇತ್ಯಾದಿ., ಅಂಶಗಳನ್ನು ಆಧರಿಸಿ ಮಾತನಾಡುವುದು ಸರ್ವೇಸಾಮಾನ್ಯವಾಗಿವೆ. ಇವುಗಳ ಪ್ರಭಾವದಿಂದಾಗಿ ರಾಜಕೀಯ (ಅ)ವ್ಯವಸ್ಥೆ ಮತ್ತು ಸಾಮಾಜಿಕ–ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿದೆ ಎಂಬುದು ಸಿದ್ಧಸೂತ್ರವಾಗಿ ಮಾರ್ಪಾಡಾಗಿದೆ. ಭಾರತೀಯ ಸಮಾಜದ ಬಗ್ಗೆ ಈ ಧ್ವನಿಯಲ್ಲಿ ಮಾತನಾಡುತ್ತಾ ಹೋದರೆ, ಅನಿಷ್ಟಕೆಲ್ಲ ಶನೀಶ್ವರನೇ ಕಾರಣ ಎಂಬಂತಾಗಿ, ಇರುವ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮಾರ್ಗೋಪಾಯವನ್ನು ಕಂಡುಕೊಳ್ಳುವ ಬದಲಿಗೆ ಪೋಷಿಸಿದಂತಾಗುತ್ತದೆ.

ಭಾರತೀಯ ಸಮಾಜವು ನಾನಾ ಸಮಸ್ಯೆಗಳಿಂದ ಆವೃತವಾಗಿದೆ ಎಂದು ಹೇಳುವುದರಿಂದ ಯಾವ ಪ್ರಯೋಜನವು ಇಲ್ಲ ಬದಲಿಗೆ, ಸಾಮಾಜಿಕ, ರಾಜಕೀಯ, ಧಾರ್ಮಿಕ ವಲಯಗಳಲ್ಲಿ ಉದ್ಭವಿಸುತ್ತಿರುವ ಸಮಸ್ಯೆಗಳು ಮೂಲ ಎಲ್ಲಿದೆ ಎಂದು ಹುಡುಕಾಟವನ್ನು ನಡೆಸುವ ಅವಶ್ಯಕತೆಯಿದೆ. ಅಂತಹ ಒಂದು ಪ್ರಯತ್ನವನ್ನು ಈ ಪುಸ್ತಕದ ಲೇಖಕರು ನಡೆಸಿರುವುದು ಅಭಿನಂದನಾರ್ಹ.

*Please cite this article as:* ಕವಿತಾ ಪಿ. ಎನ್. (2025). ಪುನರ್–ಅವಲೋಕಿಸುವಂತೆ ಮಾಡುವ ‘ಪುನರವಲೋಕನ’. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(2). ಪು.ಸಂ.* 30–32

'ಆಧುನಿಕ ಭಾರತದ ರಾಜಕೀಯ ಚಿಂತನೆಯಲ್ಲಿ ವಸಾಹತು ಚಿತ್ರಣಗಳ ಪ್ರಭಾವ'ಪುಸ್ತಕದ ಈ ಅಡಿ ಬರಹದ ಮೂಲಕ ಓದುಗರಿಗೆ ಪುಸ್ತಕದ ತಿರುಳಿನ ಬಗ್ಗೆ ಒಂದು ಸುಳಿವನ್ನು ಲೇಖಕರು ನೀಡಿದ್ದಾರೆ.

ಇಂದು ಯಾವುದನ್ನೆಲ್ಲಾ ಆಧುನಿಕ ಭಾರತದ ಚಿಂತನೆಗಳು ಎಂದು ನಾವು ಕರೆಯುತ್ತೇವೆಯೋ ಆ ಚಿಂತನೆಗಳು ವಸಾಹತುಶಾಹಿಯ ಚೌಕಟ್ಟಿನಲ್ಲಿ ರೂಪತಳೆದಿವೆ ಆದ್ದರಿಂದ, ಭಾರತೀಯರಾದ ನಮ್ಮ ಅನುಭವಕ್ಕೆ ಈ ಚಿಂತನೆಗಳು ಅಪರಿಚಿತವಾಗುವುದರ ಜೊತೆಗೆ ಕೆಲವು ಬೇಡವಾದ ಸಮಸ್ಯೆಗಳಿಗೆ ಕಾರಣವಾಗಿದೆ ಎನ್ನುವುದನ್ನು ಪ್ರಸ್ತಾಪಿಸುತ್ತಾ, ಅದನ್ನು ಬಲಪಡಿಸುವ ಪ್ರಯತ್ನವನ್ನು ಲೇಖಕರು ನಡೆಸಿದ್ದಾರೆ; ಇಲ್ಲಿಯವರೆಗೆ, ಆಧುನಿಕ ಭಾರತದ ಚಿರಪರಿಚಿತ ಚಿತಂಕರುಗಳಾದ, ರಾಜಾರಾಮ ಮೋಹನ ರಾಯ, ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಬಾಲಗಂಗಾಧರ ತಿಲಕ... ಇನ್ನೂ ಹಲವಾರು ಚಿಂತಕರುಗಳ ಸಮಾಜ ಸುಧಾರಣೆ (ಸತಿ ಆಚರಣೆಯ ನಿಷೇಧ), ವೈದಿಕ ಸ್ವರಾಜ್ಯ, ಉದಾರವಾದ, ರಾಷ್ಟ್ರೀಯತೆ, ರಾಷ್ಟ್ರೀಯವಾದ, ಸ್ವರಾಜ್ಯ... ಇತ್ಯಾದಿ ವಿಚಾರಗಳ ಕುರಿತು ಮಾತನಾಡಿದ್ದಾರೆ ಎಂಬುದು ನಮಗೆಲ್ಲರಿಗು ತಿಳಿದ ವಿಚಾರ, ಇನ್ನು ಹೆಚ್ಚೆಂದರೆ, ಆ ವಿಚಾರಗಳು ರೂಪು ತಳೆಯಲು ಕಾರಣವಾಗಿದ್ದ, ಸಾಮಾಜಿಕ, ರಾಜಕೀಯ ಅಥವಾ ಧಾರ್ಮಿಕ ಅಂಶಗಳ ಬಗ್ಗೆ ಬೇರೆ ಬೇರೆ ಪುಸ್ತಕ ಅಥವಾ ಲೇಖನಗಳಲ್ಲಿ ನಾವೆಲ್ಲರು ಓದಿಕೊಂಡು ಈ ವಿಚಾರಗಳ ಬಗ್ಗೆ ಒಂದು ಹಂತದ ತಿಳಿವಳಿಕೆಯನ್ನು ಹೊಂದಿರುವುದು ಒಂದು ಆಯಾಮವಾಗಿದೆ. ಇದಕ್ಕು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ರಾಜಕೀಯ ಚಿಂತನೆಗಳನ್ನು ಮಗದೊಂದು ಆಯಾಮದಿಂದ ನೋಡುವ ಗಂಭೀರ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ; ಮೇಲ್ನೋಟಕ್ಕೆ ಆಧುನಿಕ ಭಾರತದ ರಾಜಕೀಯ ಚಿಂತಕರುಗಳ ಪ್ರತಿಪಾದಿಸಿದ ಚಿಂತನೆಗಳು ವಿಭಿನ್ನ ವಿಷಯಗಳ ಕುರಿತಾಗಿವೆ ಎನಿಸಿದರೂ ಸಹ ಈ ಚಿಂತನೆಗಳು ರೂಪತಳೆದಿರುವುದು ಮತ್ತು ಮಂಡಿಸುವ ವಿಚಾರಗಳ ಸಾರ ಏಕರೂಪದಲ್ಲಿದೆ. ಈ ವಿಷಯಗಳ ಬಗ್ಗೆ ಒಂದು ನಿರ್ದಿಷ್ಟ ಕ್ರಮದಲ್ಲಿ ಭಾರತೀಯ ಚಿಂತಕರುಗಳು ಆಲೋಚಿಸುವಂತೆ ಪಾಶ್ಚಿಮಾತ್ಯ ಚೌಕಟ್ಟು ಅವರುಗಳ ಮೇಲೆ ಗಾಢವಾಗಿ ಪ್ರಭಾವಿಸಿದೆ, ಹಾಗೂ ಅದರಿಂದ ಉತ್ಪನ್ನವಾದ ವಿಚಾರಗಳು ನಾನಾ ರೀತಿಯ ಅಡ್ಡ ಪರಿಣಾಮಗಳಿಗೆ ಕಾರಣವಾಗಿದೆ ಎಂಬುದನ್ನು ಈ ಪುಸ್ತಕದ 14 ಭಿನ್ನ ಅಧ್ಯಾಯಗಳಲ್ಲಿ ಭಿನ್ನ ವಿಷಯಗಳನ್ನು ತೆಗೆದುಕೊಂಡು ಲೇಖಕರು ಸಮರ್ಥವಾಗಿ ತೋರಿಸಿದ್ದಾರೆ.

ಭಾರತೀಯ ಸಮಾಜದ ಬಗ್ಗೆ ಈ ಚಿಂತಕರುಗಳು ಕಳಕಳಿಯನ್ನು ಹೊಂದಿದವರು ಹಾಗು ಆಯಾ ಸಮಯದಲ್ಲಿದ್ದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನೈಜ ಕಾಳಜಿಯನ್ನು ತೋರಿದವರು. ಆದರೆ, ಆ ಸಮಸ್ಯೆಗಳನ್ನು ಬಗೆಹರಿಸುವಾಗ ಭಾರತೀಯ ಚಿಂತಕರುಗಳು ಪಶ್ಚಿಮದ ಚೌಕಟ್ಟನ್ನು ನೆಚ್ಚಿಕೊಂಡು ಆ ಮೂಲಕ ಭಾರತೀಯ ಸಮಾಜ ಮತ್ತು ವಿಷಯಗಳನ್ನು ನೋಡುವ/ಬಗೆಹರಿಸುವ ಪ್ರಯತ್ನ ಮಾಡಿದರು. ಏಕೆಂದರೆ, ವಸಾಹತುಶಾಹಿ ಪ್ರಜ್ಞೆಯು ಆ ಪ್ರಮಾಣದಲ್ಲಿ ಅವರನ್ನು ಆವರಿಸಿಕೊಂಡಿತ್ತು. ಒಂದೆಡೆ, ವಸಾಹತುಶಾಹಿ ಪ್ರಜ್ಞೆಗೆ ತಾವು ಒಳಗಾಗಿದ್ದೇವೆ ಎಂಬುದೂ ಸಹ ತಿಳಿಯದೆ ಇನ್ನೊಂದೆಡೆ, ತಮ್ಮ ಅನುಭವ ಜಗತ್ತಿಗೆ ತಾವೇ ಅಪರಿಚಿತರಾಗಿದ್ದೇವೆ ಅಥವಾ ತಮ್ಮ ಅನುಭವ ಜಗತ್ತು ಹೇಗಿರುತ್ತದೆ ಎಂಬ ಕನಿಷ್ಠ ಪ್ರಶ್ನೆಯನ್ನು ಕೇಳಿಕೊಳ್ಳದಂಥ ಸ್ಥಿತಿಗೆ ಈ ಪ್ರಜ್ಞೆ ನಮ್ಮ-ನಿಮ್ಮೆಲರನ್ನು ದೂಡಿದೆ. ಈ ಪಜ್ಞೆಗೆ ಕೇವಲ

ಆಧುನಿಕ ಭಾರತದ ರಾಜಕೀಯ ಚಿಂತಕರುಗಳು ಒಳಗಾದರು ಎನ್ನುವಂತಿಲ್ಲ ಬದಲಿಗೆ, ಎಲ್ಲ ಭಾರತೀಯರು ಈ ಪ್ರಜ್ಞೆಗೆ ಒಳಗಾಗಿದ್ದಾರೆ ಎಂದರೂ ಕೂಡ ಅತಿಶಯೋಕ್ತಿಯಲ್ಲ. ಈ ಪ್ರಜ್ಞೆಗೆ ಒಳಗಾದ ಚಿಂತಕರುಗಳು ತಮ್ಮದಲ್ಲದ ವಿಚಾರಗಳ ಮೂಲಕ ನಮ್ಮ ಸಮಾಜ, ಸಂಗತಿ ಹಾಗೂ ನಮ್ಮನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಡೆಸಿದರು ಎಂಬುದನ್ನು ಸೆಕ್ಯುಲರಿಸಂ, ಇಸ್ಲಾಮಿಕ್ ಸ್ಟೇಟ್, ಉದಾರವಾದಿ... ಮುಂತಾದ ವಿಷಯಗಳನ್ನು ಪರಿಶೀಲನೆಗೆ ಒಳಪಡಿಸುವ ಮೂಲಕ ಮನವರಿಕೆ ಮಾಡುವ ಒಂದು ಉತ್ತಮ ಪ್ರಯತ್ನವನ್ನು ಲೇಖಕರು ನಡೆಸಿದ್ದಾರೆ.

ಡಾ. ಷಣ್ಮುಖ ಅವರು ಆಧುನಿಕ ಭಾರತದ ರಾಜಕೀಯ ಚಿಂತನೆ ರೂಪುಗಳೊಳ್ಳುವಲ್ಲಿ ಪಾಶ್ಚಿಮಾತ್ಯ ಚೌಕಟ್ಟಿನ ಪ್ರಭಾವ ಮತ್ತು ಇಂದಿಗೂ ಕೂಡ ಆ ಚೌಕಟ್ಟು ಮುಂದುವರೆಯುವಲ್ಲಿ ವಸಾಹತುಶಾಹಿ ಪ್ರಜ್ಞೆಯ ಪಾತ್ರದ ಗಂಭೀರತೆಯನ್ನು ತೋರಿಸುವುದರ ಜೊತೆಗೆ ಕೆಲವು ಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ; ಈ ರಾಜಕೀಯ ಚಿಂತಕರುಗಳು ವಸಾಹತುಶಾಹಿ ಚೌಕಟ್ಟಿನ ಮೂಲಕ ಭಾರತೀಯ ಸಮಾಜ ಮತ್ತು ರಾಜಕೀಯವನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿದರ ಫಲವಾಗಿ ಇಂದು ನಾನಾ ಸಮಸ್ಯೆಗಳಿಗೆ ಬುನಾದಿಯಾಗಿದೆ. ಹಾಗಾಗೀ, ಇದನ್ನು ಸಾಂಸ್ಕೃತಿಕ ವ್ಯತ್ಯಾಸಗಳ (ಪೂರ್ವ ಮತ್ತು ಪಶ್ಚಿಮ) ಬಳುವಳಿ ಎಂದು ಭಾವಿಸಬೇಕೆ? ಒಂದೊಮ್ಮೆ, ಪಾಶ್ಚಾತ್ಯ ಅಥವಾ ವಸಾಹತುಶಾಹಿ ಫಲಶೃತಿಯಾಗಿದೆ ಎಂದಾದರೆ, ವಸಾಹತುಶಾಹಿ ಚೌಕಟ್ಟಿನಾಚೆ ಭಾರತೀಯ ಸಮಾಜ, ರಾಜಕೀಯವನ್ನು ಹೇಗೆ ಅರ್ಥೈಸಿಕೊಳ್ಳುವುದು? ಲೇಖಕರು ಎತ್ತಿರುವ ಈ ಸವಾಲನ್ನು ಯಾವುದೇ ಇಸಂ ಅಥವಾ ಪೂರ್ವಾಗ್ರಹೀತಕ್ಕೆ ಒಳಗಾಗದೆ ಎಲ್ಲರೂ ಯೋಚಿಸುವ ಅನಿವಾರ್ಯತೆ ಇದೆ. ವಿಶೇಷವಾಗಿ, ಸಂಶೋಧಕರು, ವಿದ್ಯಾರ್ಥಿಗಳು, ಬಹುಶಾಸ್ತ್ರೀಯ ವಿಷಯಗಳನ್ನು ಬೋಧಿಸುವ ಅಧ್ಯಾಪಕರುಗಳು. ಏಕೆಂದರೆ, ಈ ಸವಾಲು/ಸಮಸ್ಯೆಗಳನ್ನು ಯಾವುದೇ ಒಬ್ಬ ವ್ಯಕ್ತಿ ಅಥವಾ ಒಂದು ಪೀಳಿಗೆಯಿಂದ ಸಂಪನ್ನವಾಗುವ ಕೆಲಸವಲ್ಲ. ಬದಲಿಗೆ, ವ್ಯಕ್ತಿಗಳು ಮತ್ತು ತಲೆಮಾರುಗಳು ಕೈಜೋಡಿಸಬೇಕಿದೆ. ಈ ದಿಕ್ಕಿನಲ್ಲಿ, ಯಾರ್ಯಾರು ಭಾರತೀಯ ಸಮಾಜ, ಸಂಸ್ಕೃತಿ, ರಾಜಕೀಯ... ಮುಂತಾದವುಗಳಲ್ಲಿ ಅಡಕವಾಗಿರುವ ಸವಾಲು–ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಬಗೆಹರಿಸುವ ದಿಸೆಯಲ್ಲಿ ಯೋಚಿಸುತ್ತಾರೋ ಮತ್ತು ಜ್ಞಾನದ ಮಿತಿಯನ್ನು ವಿಸ್ತರಿಸಿಕೊಳ್ಳಲು ಇಚ್ಛಿಸುತ್ತಾರೋ ಅವರಿಗೆ ಈ ಪುಸ್ತಕವು ಮೊದಲ ಮೆಟ್ಟಿಲಾಗುತ್ತದೆ ಎಂದು ಖಚಿತವಾಗಿ ಹೇಳಬಹುದು. ಇಂಥ ಇನ್ನೂ ಉತ್ತಮ ಪುಸ್ತಕಗಳನ್ನು ಲೇಖಕರು ಹೊರತರಲಿ ಎಂದು ಆಶಿಸುತ್ತೇನೆ.

**ಕೃತಿ:** ಪುನರವಲೋಕನ,

**ಲೇಖಕರು:** ಡಾ, ಎ ಷಣ್ಮುಖ.

**ಪ್ರಕಾಶಕರು:** ವಸಂತ ಪ್ರಕಾಶನ, ಜಯನಗರ ಬೆಂಗಳೂರು

**ಒಟ್ಟು ಪುಟಗಳು:** 376,

**ಬೆಲೆ:** 390 ರೂಪಾಯಿ

**ಮೊದಲ ಮುದ್ರಣ:** 2025.